# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** ಕೆರೆಗಳ / ಟ್ಯಾಂಕ್‌ಗಳ ಅಭಿವೃದ್ಧಿ/ಬಲವರ್ಧನೆಪಡಿಸಲು ಸುಧಾರಣೆ ಕಾಮಗಾರಿಗಳಿಗಾಗಿ ಸಣ್ಣ ನೀರಾವರಿ ಇಲಾಖೆಗೆ ರೂ.100.00 ಕೋಟಿಗಳನ್ನು ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕಂಇ 449 ಟಿಎನ್‌ಆರ್ 2023, ದಿನಾಂಕ:13.09.2023, 12.10.2023 ಮತ್ತು 04.11.2023.
2. ಸಣ್ಣ ನೀರಾವರಿ ಇಲಾಖೆ ರವರ ಏಕ ಕಡತ ಸಂಖ್ಯೆ: MID/520/MISU/2023 (Part-1).
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/315/ವೆಚ್ಚ-7/2024, ದಿನಾಂಕ: 13.03.2024
4. ಸರ್ಕಾರದ ಆದೇಶ ಸಂಖ್ಯೆ: ಕಂಇ 552 ಟಿಎನ್ ಆರ್ 2023 (1), ದಿನಾಂಕ: 16.03.2024.
5. ಸಣ್ಣ ನೀರಾವರಿ ಇಲಾಖೆ ರವರ ಏಕ ಕಡತ ಸಂಖ್ಯೆ: MID/520/MISU/2023 (Part-2).
6. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/315/ವೆಚ್ಚ-7/2024, ದಿನಾಂಕ: 05.04.2024
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ಸಂಖ್ಯೆ: ಸಿಎಸ್ 34 ಎಸ್ ಸಿ ಎಂ 2024(1), ದಿನಾಂಕ: 17.05.2024
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಇವರ ಅ.ಟಿ. ಸಂಖ್ಯೆ: MID/520/MISU/2023, ದಿನಾಂಕ: 30.05.2024

* * * * *

**ಪ್ರಸ್ತಾವನೆ:-**

ರಾಜ್ಯದಲ್ಲಿ 2023ರ ಮುಂಗಾರು ಹಂಗಾಮಿನಲ್ಲಿ ಮಳೆಯ ಕೊರತೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಬರ ಕೈಪಿಡಿ 2020ರ ಪ್ರಕಾರ ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ

ತಾಲ್ಲೂಕುಗಳೆಂದು ಮೇಲೆ (1) ರಲ್ಲಿ ಓದಲಾದ ದಿನಾಂಕ:13.09.2023, 12.10.2023 ಮತ್ತು 04.11.2023ರ ಆದೇಶಗಳಲ್ಲಿ ಘೋಷಿಸಲಾಗಿರುತ್ತದೆ.

2023 ನೇ ಸಾಲಿನ ಜೂನ್ 1 ರಿಂದ ಸೆಪ್ಟೆಂಬರ್ 30ರ ವರೆವಿಗೆ ಒಟ್ಟಾರೆಯಾಗಿ ರಾಜ್ಯದಲ್ಲಿ ವಾಡಿಕೆ ಮಳೆ 852 ಮಿ.ಮಿ ಕ್ಕಿಂತ 642 ಮಿ.ಮಿ. ಮಳೆ ಮಾತ್ರ ಆಗಿದ್ದು, ಶೇ.25ರಷ್ಟು ಮಳೆಯ ಕೊರತೆಯಾಗಿರುತ್ತದೆ. ರಾಜ್ಯದಲ್ಲಿ 2023 ರ ಮುಂಗಾರು ಋತುವಿನ ದ್ವಿತೀಯಾರ್ಧದಲ್ಲಿ ದೊಡ್ಡ ಋತುಮಾನದ ವ್ಯತ್ಯಾಸಗಳಿಗೊಳಗಾದವು. ಮುಖ್ಯವಾಗಿ ಆಗಸ್ಟನಲ್ಲಿ ಕಳೆದ 122 ವರ್ಷಗಳಲ್ಲಿ ಇದೆ ವರ್ಷ ಅತ್ಯಂತ ಕಡಿಮೆ ಮಳೆ ದಾಖಲಾಗಿದೆ; 2023 ರ ಜೂನ್ 1 ರಿಂದ 30 ಸೆಪ್ಟೆಂಬರ್ ವರೆಗೆ, ಸಾಮಾನ್ಯ ಮಳೆ ಹಾಗೂ ದೈನಂದಿನ ವಾಸ್ತವಿಕ ಮಳೆಯನ್ನು ಹೋಲಿಸಿದರೆ ರಾಜ್ಯವು 122 ದಿನಗಳಲ್ಲಿ ಕೇವಲ 24 ದಿನಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗಿರುವುದು ಕಂಡು ಬರುತ್ತದೆ. ಇದಲ್ಲದೆ, ಹವಾಮಾನ ಬದಲಾವಣೆಯಿಂದ ಅನಿಯಮಿತ ಮಳೆಯನ್ನು ಅಲ್ಪಾವಧಿಯಲ್ಲಿಯೇ ದೊಡ್ಡ ಪ್ರಮಾಣದ ಮಳೆಯ ಸನ್ನಿವೇಶಗಳು ಹೆಚ್ಚಾಗಿದ್ದು, ವಾಡಿಕೆ ಮಳೆ ಕಡಿಮೆಯಾಗಿದೆ. ಇದರಿಂದಾಗಿ ರಾಜ್ಯದ, ಅಣೆಕಟ್ಟು ಮತ್ತು ಅಂತರ್ಜಲದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ರಾಜ್ಯದಲ್ಲಿ ನೀರಿನ ಅಭಾವದ ಸ್ಥಿತಿ ಉಂಟಾಗಿದೆ. ಆದ್ದರಿಂದ ರಾಜ್ಯವು ಬರ ಉಪಶಮನಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಕಳೆದ 23 ವರ್ಷಗಳಲ್ಲಿ (2001-2023) ಬರಪೀಡಿತ ತಾಲೂಕುಗಳ ಮಾಹಿತಿಯ ಪ್ರಕಾರ, ಸಾಮಾನ್ಯವಾಗಿ ಅತಿವೃಷ್ಟಿ ದಾಖಲಿಸುವ ಕರಾವಳಿ ಜಿಲ್ಲೆಗಳು ಮಾತ್ರ ಬರದಿಂದ ಮುಕ್ತವಾಗಿವೆ. ಆದಾಗ್ಯೂ, ಈ ಪ್ರದೇಶಗಳು ಸಹ ಅನಿಯಮಿತ ಮಳೆ ಹಂಚಿಕೆಗೆ ಹೆಚ್ಚು ದುರ್ಬಲವಾಗುತ್ತಿವೆ. 2001 ರಿಂದ 2023 ರವರೆಗಿನ ಇಪ್ಪತ್ಮೂರು ವರ್ಷಗಳಲ್ಲಿ, ರಾಜ್ಯವು 2005, 2007, 2010, 2017, 2020, 2021 ಮತ್ತು 2022 ಹೊರತುಪಡಿಸಿ 16 ವರ್ಷಗಳು ಬರವನ್ನು ಅನುಭವಿಸಿದೆ. ಬರಗಾಲದಿಂದಾಗಿ ಸುಮಾರು ತಾಲ್ಲೂಕುಗಳು ಕಳೆದ 12 ರಿಂದ 15 ವರ್ಷಗಳಿಂದ ತೊಂದರೆಗೀಡಾಗಿರುತ್ತವೆ. ರಾಜ್ಯದಲ್ಲಿ ಬರಗಾಲಕ್ಕೆ ಅನಿಯಮಿತ ಹವಾಮಾನವೇ ಪ್ರಮುಖ ಕಾರಣ. ಕಳೆದ ಶತಮಾನದಲ್ಲಿ ರಾಜ್ಯದಲ್ಲಿ ಮಳೆಯ ಪ್ರಮಾಣವು ವ್ಯಾಪಕವಾಗಿ ಬದಲಾಗಿಲ್ಲ, ಆದರೆ ಮಳೆಯ ವಿತರಣೆಯು ತಾತ್ಕಾಲಿಕ ಮತ್ತು ಪ್ರಾದೇಶಿಕ ಎರಡೂ ಅನಿಯಮಿತವಾಗಿದೆ ಮತ್ತು ಅಂತಹ ಪರಿಸ್ಥಿತಿಗಳು ಕೃಷಿಗೆ ಹಾನಿಕಾರಕವಾಗಿದೆ. ಆದ್ದರಿಂದಾಗಿ, ಸಂಬಂಧಪಟ್ಟ ಎಲ್ಲಾ ಇಲಾಖೆಗಳನ್ನು ಒಟ್ಟುಗೂಡಿಸಿ ಸಣ್ಣ ನೀರಾವರಿ ಇಲಾಖೆಯ ಕೆರೆಗಳ / ಟ್ಯಾಂಕ್‌ಗಳ ಅಭಿವೃದ್ಧಿಯಂತಹ ಉಪಶಮನ ಕ್ರಮಗಳಿಂದಾಗಿ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಿ, ಕೃಷಿ,

ತೋಟಗಾರಿಕೆ, ಪಶುಸಂಗೋಪನೆ ಚಟುವಟಿಕೆಗಳಿಗೆ ಹೆಚ್ಚಿನ ಉಪಕಾರಿಯಾಗುವುದು ಪರಿಣಾಮಕಾರಿಯಾದ ಕ್ರಮವಾಗಿರುತ್ತದೆ

ಮೇಲೆ (2) ರಲ್ಲಿ ಓದಲಾದ ದಿನಾಂಕ: 01.12.2023 ರ ಏಕ ಕಡತದಲ್ಲಿ ಸಣ್ಣ ನೀರಾವರಿ ಇಲಾಖೆಯ ಪ್ರಸ್ತಾವನೆಯಲ್ಲಿ 2023-24 ಸಾಲಿನಲ್ಲಿ ಸರಿಯಾಗಿ ಮಳೆಯಾಗದ ಮತ್ತು ಮುಂಗಾರು ವಿಫಲವಾದ ಕಾರಣಗಳಿಂದ ಟ್ಯಾಂಕ್‌ಗಳಲ್ಲಿ / ಕೆರೆಗಳಲ್ಲಿ ಕಡಿಮೆ ನೀರು ಸಂಗ್ರಹಣೆಯಾಗಿರುವುದರಿಂದ, ಕೃಷಿ ಚಟುವಟಿಕೆಗಳಿಗೆ ನೀರು ಒದಗಿಸಲು ಸಾಧ್ಯವಾಗಿರುವುದಿಲ್ಲ. ಮಳೆ ನೀರನ್ನು ಸದುಪಯೋಗಪಡಿಸಿಕೊಳ್ಳಲು 93 ಟ್ಯಾಂಕ್‌ಗಳ / ಕೆರೆಗಳ ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಬರಗಾಲದ ಹಿನ್ನಲೆಯಲ್ಲಿ ಮುಂಬರುವ ತಿಂಗಳುಗಳಲ್ಲಿ ಮಳೆ ನೀರನ್ನು ಬಳಸಿಕೊಳ್ಳಲು ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಅಡಿಯಲ್ಲಿ ರೂ.100.00 ಕೋಟಿಗಳನ್ನುಒದಗಿಸುವಂತೆ ಪ್ರಸ್ತಾಪಿಸಿರುತ್ತದೆ.

ಕರ್ನಾಟಕದ ಒಟ್ಟು 223 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳನ್ನಾಗಿ ಘೋಷಿಸಲಾಗಿದ್ದು, ಆದ್ದರಿಂದ ಬರದ ವಿಪತ್ತು ಉಪಶಮನ ಪ್ರಸ್ತಾವಗಳನ್ನು ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಅಡಿಯಲ್ಲಿ ತೆಗೆದುಕೊಳ್ಳಬಹುದು ಮತ್ತು ಇದರಡಿ ಪರಿಗಣಿಸಬಹುದು.

ಸದರಿ ಪ್ರಸ್ತಾವನೆಯು ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಮಾರ್ಗಸೂಚಿಗಳ ಈ ಕೆಳಕಂಡ ಷರತ್ತುಗಳನ್ನು ಪೂರೈಸುತ್ತದೆ:-

i. ಷರತ್ತು 9 (iv) - ವಿಪತ್ತು ಅಪಾಯಗಳು ಮತ್ತು ಅದರ ಪರಿಣಾಮಗಳನ್ನು ಕಡಿಮೆ ಮಾಡಲು ಉತ್ತೇಜಿಸುವ ಯೋಜನೆಗಳು.

ii ಅನುಬಂಧ – I - ಬರಗಾಲಕ್ಕೆ ಕೆಲವು ಅಪಾಯದ ನಿರ್ದಿಷ್ಟ ಉಪಶಮನ ಕ್ರಮಗಳು ಸ್ಥಳೀಯ ಮೂಲಸೌಕರ್ಯಗಳ ಬಲವರ್ಧನೆ.

39. Improving water harvesting and conservation through artificial recharge Of Ground water and traditional methods at the community level.

42. Improving village ponds/tanks.

ಸದರಿ ಪ್ರಸ್ತಾವನೆಯು ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆ ಆಗಿರುತ್ತದೆ.

ದಿನಾಂಕ: 28.02.2024 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಈ ಕೆಳಕಂಡಂತೆ ಪ್ರಸ್ತಾವನೆಯು ಅನುಮೋದನೆಯಾಗಿರುತ್ತದೆ.

"iii) ಸಣ್ಣ ನೀರಾವರಿ ಇಲಾಖೆಗೆ, ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ರೂ. 100.00 ಕೋಟಿಗಳನ್ನು, ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಮಂಜೂರು ಮಾಡಲು ಹಾಗು ಯೋಜನೆಯ ಮಾರ್ಗಸೂಚಿಗಳನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುದಾನವನ್ನು ಸಣ್ಣ ನೀರಾವರಿ ಇಲಾಖೆಗೆ ಬಿಡುಗಡೆ ಮಾಡಲು"

ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ 93 ಕೆರೆ/ಟ್ಯಾಂಕ್‌ಗಳ ಸುಧಾರಣಾ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ರೂ. 100.00 ಕೋಟಿ ಮಂಜೂರು ಮಾಡಲು ಮೇಲೆ (3)ರಲ್ಲಿ ಓದಲಾದ ದಿನಾಂಕ: 13.03.2024ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದರ ಮೇರೆಗೆ, ಮೇಲೆ (4) ರಲ್ಲಿ ಓದಲಾದ ದಿನಾಂಕ: 16.03.2024 ರ ಸರ್ಕಾರಿ ಆದೇಶದಲ್ಲಿ ರೂ. 100 ಕೋಟಿಗಳನ್ನು ಸಣ್ಣ ನೀರಾವರಿ ಇಲಾಖೆಗೆ ಬಿಡುಗಡೆ ಮಾಡಲು ಆದೇಶಿಸಲಾಗಿದ್ದು, ಆದರೆ, ಆರ್ಥಿಕ ವರ್ಷವು ಮುಕ್ತಾಯವಾದ ಕಾರಣ ಸದರಿ ಮೊತ್ತವನ್ನು ಬಿಡುಗಡೆಗೊಳಿಸಿರುವುದಿಲ್ಲವೆಂದು ತಿಳಿಸುತ್ತಾ, 96 ಕೆರೆ/ಟ್ಯಾಂಕ್ ಗಳ ಪೈಕಿ ರಾಜ್ಯದ ಒಟ್ಟು 25 ಜಿಲ್ಲೆಗಳಲ್ಲಿನ 89 ಕೆರೆ /ಟ್ಯಾಂಕ್ ಗಳನ್ನು ಒಟ್ಟು 96 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ತಾಂತ್ರಿಕವಾಗಿ ಪರಿಶೀಲಿಸಿದ ವಿಸ್ತೃತ ಯೋಜನಾ ವರದಿಯನ್ನು ಕಳುಹಿಸಿಕೊಡುತ್ತಾ, ಪ್ರಸ್ತಾಪಿಸಿರುವ ಕೆರೆಗಳ ಉಸ್ತುವಾರಿ ನಿರ್ವಹಿಸುತ್ತಿರುವ ಸಹಾಯಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಖುದ್ದಾಗಿ ಸ್ಥಳ ಪರಿವೀಕ್ಷಣೆ ನಡೆಸಿ, ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜಿನಲ್ಲಿ ಸೂಕ್ತ ಪ್ರಾವಧಾನ ಮಾಡಿರುತ್ತಾರೆ. ಸದರಿ ಅಂದಾಜು ಪಟ್ಟಿಗಳನ್ನು ಕಾರ್ಯಪಾಲಕ ಇಂಜಿನಿಯರ್ ರವರು ಪರಿಶೀಲಿಸಿ, ಅಧೀಕ್ಷಕ ಇಂಜಿನಿಯರ್ ಕಛೇರಿಗಳಲ್ಲಿ ಅಂದಾಜುಗಳನ್ನು ತಾಂತ್ರಿಕ ಪರಿಶೀಲನೆಗೊಳಪಡಿಸಲಾಗಿರುತ್ತದೆಂದು ಹಾಗೂ ಸದರಿ ಅಂದಾಜು ಪಟ್ಟಿಗಳನ್ನು ಮುಖ್ಯ ಇಂಜಿನಿಯರ್ ಕಛೇರಿಯಲ್ಲಿಯೂ ಸಹ ತಾಂತ್ರಿಕವಾಗಿ ಪರಿಶೀಲಿಸಲಾಗಿರುತ್ತದೆಂದು ವರದಿ ಮಾಡುತ್ತಾ, ಸಣ್ಣ ನೀರಾವರಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು ದೃಢೀಕರಿಸುತ್ತಾ, ಇನ್ನುಳಿದ 4 ಕೋಟಿಗಳಲ್ಲಿ

4 ಕೆರೆ/ಟ್ಯಾಂಕ್ ಗಳನ್ನು ಅಭಿವೃದ್ಧಿ ಪಡಿಸುವ ಸಂಬಂಧ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಲಾಗುವುದೆಂದು ತಿಳಿಸುತ್ತಾ, ರೂ. 100 ಕೋಟಿಗಳ ಅನುದಾನವನ್ನು ರಾಜ್ಯ ವಿಪತ್ತು ಉಪಶಮನ ನಿಧಿಯಿಂದ 2024-25 ನೇ ಸಾಲಿನಲ್ಲಿ ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ [Code Number: (CCO)008140] ಗೆ ಬಿಡುಗಡೆ ಮಾಡುವಂತೆ ಸಣ್ಣ ನೀರಾವರಿ ಇಲಾಖೆಯು ಮೇಲೆ ಓದಲಾದ (5) ರ ಏಕಕಡತದಲ್ಲಿ ಕೋರಿರುತ್ತದೆ. ಮೇಲೆ ಓದಲಾದ (8)ರ ಅನಧಿಕೃತ ಟಿಪ್ಪಣಿಯಲ್ಲಿ , ಇನ್ನುಳಿದ 4 ಕೋಟಿಗಳ ಮೊತ್ತದ 4 ಕೆರೆ/ಟ್ಯಾಂಕ್ ಕಾಮಗಾರಿಗಳ ವಿಸ್ತೃತ ಯೋಜನಾ ವರದಿಯನ್ನು ಹಾಗೂ ಪರಿಷ್ಕೃತ SDMF ಕ್ರಿಯಾ ಯೋಜನೆಯನ್ನು ಕಳುಹಿಸಿಕೊಟ್ಟಿರುತ್ತಾರೆ.

ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ರೂ. 100 ಕೋಟಿಗಳನ್ನು ಸಣ್ಣ ನೀರಾವರಿ ಇಲಾಖೆಗೆ 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡುವಂತೆ ಮೇಲೆ ಓದಲಾದ (6) ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಅಭಿಪ್ರಾಯ ನೀಡಿರುತ್ತದೆ. ಮೇಲೆ ಓದಲಾದ (7)ರ ಸುತ್ತೋಲೆಯಲ್ಲಿ, ಮೂಲಭೂತ ಸೌಲಭ್ಯ ಕಾಮಗಾರಿಗಳು, ಅಭಿವೃದ್ಧಿ ಕಾಮಗಾರಿಗಳು ಮತ್ತು ಸರಕು ಮತ್ತು ಸೇವೆಗಳ ಖರೀದಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲು, ಅಂತಿಮಗೊಳಿಸಲು ಹಾಗೂ ಕಾರ್ಯಾದೇಶಗಳನ್ನು ನೀಡುವ ಪ್ರಸ್ತಾವನೆಗಳಿಗೆ ಭಾರತ ಚುನಾವಣಾ ಆಯೋಗವು ದಿನಾಂಕ: 16.05.2024ರ ಪತ್ರದಲ್ಲಿ ಮಾದರಿ ನೀತಿ ಸಂಹಿತೆಯಿಂದ ಸಾಮಾನ್ಯ ವಿನಾಯಿತಿ ನೀಡಿರುವುದರಿಂದ, ಈ ವಿಷಯದ ಪ್ರಸ್ತಾವನೆಗಳಿಗೆ ಸಕ್ಷಮ ಪ್ರಾಧಿಕಾರಿಗಳು ಚುನಾವಣಾ ಆಯೋಗದ ನಿರ್ಣಯದಲ್ಲಿನ ಷರತ್ತಿಗೊಳಪಟ್ಟು ಸೂಕ್ತ ನಿರ್ಣಯ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ. ಆದುದರಿಂದ, ರಾಜ್ಯದಲ್ಲಿನ ಒಟ್ಟು 93 ಕೆರೆ/ ಟ್ಯಾಂಕ್ ಗಳನ್ನು ಅಭಿವೃದ್ಧಿಪಡಿಸಲು ಸಣ್ಣ ನೀರಾವರಿ ಇಲಾಖೆಗೆ ಮೇಲೆ ಓದಲಾದ (4)ರ ದಿನಾಂಕ: 16.03.2024ರ ಸರ್ಕಾರಿ ಆದೇಶದಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ಬಿಡುಗಡೆ ಮಾಡಲಾಗಿದ್ದ ರೂ. 100 ಕೋಟಿಗಳನ್ನು 2024-25ನೇ ಸಾಲಿನಲ್ಲಿ ಬಿಡುಗಡೆ ಮಾಡಲು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 552 ಟಿಎನ್‌ಆರ್ 2023,</u>**
**<u>ಬೆಂಗಳೂರು, ದಿನಾಂಕ: 01.06.2024.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಬರುವ ತಿಂಗಳುಗಳಲ್ಲಿ ಮಳೆ ನೀರನ್ನು ಬಳಸಿಕೊಳ್ಳಲು / ಸದುಪಯೋಗಪಡಿಸಿಕೊಳ್ಳಲು ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ಈ ಆದೇಶದ ಅನುಭಂಧದಲ್ಲಿ ಇರುವ 93 ಕೆರೆಗಳ / ಟ್ಯಾಂಕ್‌ಗಳ ಅಭಿವೃದ್ಧಿ/ಬಲವರ್ಧನೆಪಡಿಸಲು ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲು

ಸಣ್ಣ ನೀರಾವರಿ ಇಲಾಖೆಗೆ ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ರೂ. 100.00 ಕೋಟಿಗಳನ್ನು (ನೂರು ಕೋಟಿಗಳು ಮಾತ್ರ) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ [Code Number: (CCO)008140] ಗೆ ಕೆಳಕಂಡ **ಷರತ್ತುಗಳ ಪಾಲನೆಗೆ ಒಳಪಟ್ಟು** ಬಿಡುಗಡೆ ಮಾಡಿ ಆದೇಶಿಸಿದೆ.

ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ ಇವರು ಕೆಳಕಂಡ **ಷರತ್ತುಗಳ ಪಾಲನೆಗೆ ಒಳಪಟ್ಟು ಅನುದಾನ ಬಳಕೆ ಮಾಡಬೇಕಾಗಿರುತ್ತದೆ:-**

I. ಸದರಿ ಅನುದಾನವನ್ನು ಭಾರತ ಸರ್ಕಾರದ ಗೃಹ ಮಂತ್ರಾಲಯವು SDMF ರಡಿ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಹಾಗೂ ಈ ಇಲಾಖೆಯು ಕಾಲ-ಕಾಲಕ್ಕೆ ಹೊರಡಿಸುವ ಮಾಗಸೂಚಿಗಳ ಪ್ರಕಾರ ಪಾರದರ್ಶಕವಾಗಿ ಅನುದಾನದ ಯಾವುದೇ ರೀತಿಯ ಪುನರಾವರ್ತನೆ ಇಲ್ಲದೆ ಬಳಕೆ ಮಾಡುವುದು.

II. ಸದರಿ ಕಾಮಗಾರಿಗಳ ಕೆಲಸಗಳಲ್ಲಿ ಮತ್ತು ಅನುದಾನದ ಬಳಕೆಯಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಅಥವಾ ಇನ್ನಾವುದೇ ಅನುದಾನದ ಯಾವುದೇ ರೀತಿಯ ಪುನರಾವರ್ತನೆ ಆಗಬಾರದು.

III. ಸದರಿ ಅನುದಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 (KTPP) ಕಾಯ್ದೆ ಮತ್ತು ನಿಯಮಗಳನ್ವಯ ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಅನುಸರಿಸಿ ಪಾರದರ್ಶಕವಾಗಿ ಟೆಂಡರ್‌ಗಳ ಮುಖೇನ ಅನುಷ್ಠಾನಗೊಳಿಸಲು ಕ್ರಮವಹಿಸುವುದು.

IV. ಹಣ ಬಳಕೆಯಲ್ಲಿ ಯಾವುದೇ ಲೋಪವಾದಲ್ಲಿ, ಸಣ್ಣ ನೀರಾವರಿ ಇಲಾಖೆಯ ಸಂಭಂದಪಟ್ಟ ಅಧಿಕಾರಿ / ನೌಕರರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.

V. ಬಿಡುಗಡೆ ಮಾಡಲಾದ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು ಹಾಗೂ ಬಳಕೆ ಮಾಡಿದ ಮೊತ್ತದ ಅಂಶವಾರು ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಈ ಇಲಾಖೆಗೆ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ ಇವರು ಸಲ್ಲಿಸತಕ್ಕದ್ದು.

VI. ಅಭಿವೃದ್ಧಿಗೊಳಿಸುವ ಕೆರೆಗಳ / ಟ್ಯಾಂಕ್ ಗಳ ವಿವರಗಳನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಸಹ ವಿವರಗಳೊಂದಿಗೆ ಮಂಡಿಸುವುದು.

VII. ಪ್ರತಿಯೊಂದು ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ, ಪ್ರಾರಂಭಿಕ ಹಾಗೂ ಹಂತವಾರು 3ನೇ ವ್ಯಕ್ತಿ/ಸಂಸ್ಥೆ ತಪಾಸಣೆ ನಡೆಸುವ ವಿಧಾನವನ್ನು ನಿಯಮಾನುಸಾರ ಕ್ರಮ ಕೈಗೊಳ್ಳುವುದು.

VIII. ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ ಈ ಕೆಳಕಂಡ ನಮೂನೆಯಲ್ಲಿ ಕಾಮಗಾರಿಗಳ ಎಲ್ಲಾ ವಿವರಗಳನ್ನು ಮುಖ್ಯ ಅಭಿಯಂತರರ ಕಚೇರಿಗಳಲ್ಲಿ, ಸಂಬಂಧಪಟ್ಟ ಜಿಲ್ಲಾ ಕಚೇರಿಯಲ್ಲಿ, ತಾಲ್ಲೂಕು ಕಛೇರಿಗಳಲ್ಲಿ, ಗ್ರಾಮ ಪಂಚಾಯತಿಗಳಲ್ಲಿ, ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರಕಟಿಸತಕ್ಕದ್ದು. ಮುಂದುವರೆದು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆರವರುಗಳು ಕಡ್ಡಾಯವಾಗಿ ಈ ಕೆಳಕಂಡ ನಮೂನೆಯಲ್ಲಿ ಮಾಹಿತಿಯನ್ನು ಹಾಗೂ ಪ್ರತಿಯೊಂದು ಕಾಮಗಾರಿಗಳ ವಿಸ್ತೃತ ಯೋಜನಾ

ವರದಿಗಳನ್ನು ತಮ್ಮ ಜಾಲತಾಣಗಳಲ್ಲಿ (ವೆಬ್‌ಸೈಟ್‌ನಲ್ಲಿ) ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸುವುದು.

**ನಮೂನೆ**

| ಕೆರೆಗಳ / ಟ್ಯಾಂಕ್‌ಗಳ ವಿವರ (ಜಿಲ್ಲೆ, ತಾಲ್ಲೂಕು & ಗ್ರಾಮ ಪಂಚಾಯಿತಯ ಹಾಗು ಗ್ರಾಮದ ಹೆಸರು) | ಕೆರೆಗಳ / ಟ್ಯಾಂಕ್‌ಗಳ ವಿವರ GIS Coordinates | ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ | ಕಾಮಗಾರಿಯ ವಿಸ್ತೃತ ಯೋಜನಾ ವರದಿ ಮತ್ತು ಸಣ್ಣ ನೀರಾವರಿ ಇಲಾಖೆಯಿಂದ ಅನುಮೋದಿತ ಅಂದಾಜು ಪಟ್ಟಿ | ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಸಣ್ಣ ನೀರಾವರಿ ಇಲಾಖೆಯು ಏಜೆನ್ಸಿಗಳಿಗೆ ನೀಡಿರುವ ಕಾರ್ಯಾದೇಶದ ಪ್ರತಿ(Work Order) |
|---|---|---|---|---|
| 1 | 2 | 3 | 4 | 5 |
| | | | | |

**IX**. 93 ಕೆರೆ/ಟ್ಯಾಂಕ್ ಗಳ ಅಭಿವೃದ್ಧಿ/ಬಲವರ್ಧನೆಯ ಕಾಮಗಾರಿಗಳಿಂದ ನೀರಿನ ಅಭಾವವನ್ನು ನೀಗಿಸಲು ಉಂಟಾದ ಉಪಶಮನ ಕ್ರಮಗಳು ಹಾಗೂ ಸಾರ್ವಜನಿಕರಿಗೆ ಉಂಟಾದ ಉಪಯೋಗಗಳು, ಮುಂದಿನ ದಿನಗಳಲ್ಲಿ ಬರಪರಿಸ್ಥಿತಿ ತಗ್ಗಿಸಲು/ಅಂತರ್ಜಲ ವೃದ್ಧಿಯಾಗಲು ಸಹಕಾರಿಯಾದ ಬಗ್ಗೆ ಹಾಗೂ ಕೆರೆ/ಟ್ಯಾಂಕ್ ಗಳಲ್ಲಿ ನೀರಿನ ಸಂಗ್ರಹಣೆ ಹೆಚ್ಚಾಗಿರುವ ವಿವರಗಳ ಬಗ್ಗೆ ವಿಸ್ತೃತವಾದ ವರದಿಯನ್ನು ಈ ಇಲಾಖೆಗೆ ಸಲ್ಲಿಸುವುದು.

ಸದರಿ ಅನುದಾನವನ್ನು 2024-25 ನೇ ಸಾಲಿನ ರಾಜ್ಯ ವಿಪತ್ತು ಉಪಶಮನ ನಿಧಿಯ (SDMF) ಲೆಕ್ಕ ಶೀರ್ಷಿಕೆ "2245~08~101~0~01~059 ರಡಿ ಭರಿಸತಕ್ಕದ್ದು.

ಈ ಆದೇಶವನ್ನು ಸಚಿವ ಸಂಪುಟದ ಸಭೆಯ ಪ್ರಕರಣ ಸಂಖ್ಯೆ: ಸಿ: 207/2024, ದಿನಾಂಕ: 28.02.2024 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/315/ವೆಚ್ಚ-7/2024, ದಿನಾಂಕ: 05.04.2024 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಸ್. ಆರ್. ಶಿವಶಂಕರ್)**
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ,
(ವಿಪತ್ತು ನಿರ್ವಹಣೆ ಮತ್ತು ನೋ.ಮು).

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (A & E), ಕರ್ನಾಟಕ, ಪಿ.ಬಿ.ನಂ. 5329/5369, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (G & SSA), ಕರ್ನಾಟಕ, ಪಿ.ಬಿ.ನಂ. 5398, ನ್ಯೂ ಬಿಲ್ಡಿಂಗ್ 'ಆಡಿಟ್ ಭವನ', ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ), ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ. 7 & 8), ವಿಧಾನಸೌಧ, ಬೆಂಗಳೂರು.
7. ಎಲ್ಲಾ ಜಿಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಭೂಮಿ, ನಗರ ಆಸ್ತಿ ದಾಖಲೆಗಳು) ರವರು ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಜಂಟಿ ಕಾರ್ಯದರ್ಶಿ (ಸಂಪುಟ ಶಾಖೆ) ರವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ರಾಜ್ಯ ವಿಕೋಪ ಪರಿಹಾರ ನಿಧಿ ಅಡಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲು ಪ್ರಸ್ತಾಪಿರುವ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯ್ತಿ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಜಲಾನಯನ ಪ್ರದೇಶ (ಚ. ಕಿ.ಮೀ) | ಜಲಾವೃತ ಪ್ರದೇಶ (ಹೆಕ್ಟೇರ್) | ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ) | ಅಕ್ಷಾಂಶ/ರೇಖಾಂಶ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಬೆಳಗಾವಿ | ಹುಕ್ಕೇರಿ | ಕಣಗಲಾ | ಕಣಗಲಾ ಸೈಟ್-2 ಕೆರೆ ಅಭಿವೃದ್ಧಿ ಕಾಮಗಾರಿ | 100.00 | 0.46 | 4.05 | 102.00 | 16° 20'26.2"N / 74°26'22.4"E | |
| 2 | ಬೆಳಗಾವಿ | ಬೆಳಗಾವಿ | ಕೆ.ಕೆ.ಕೊಪ್ಪ | ಕೆ.ಕೆ ಕೊಪ್ಪ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 4.92 | 20.68 | 273.00 | 15°54'16.8"N / 74° 24'8.7"E/ | |
| 3 | ಬೆಳಗಾವಿ | ಬೈಲಹೊಂಗಲ | ಬೆಳವಡಿ | ಸಿದ್ದಸಮುದ್ರ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 46.88 | 104.50 | 490.00 | 15°41'12"N/74° 54'18"E/ | |
| 4 | ಬೆಳಗಾವಿ | ರಾಮದುರ್ಗ | ಮುಳ್ಳೂರ | ಮುಳ್ಳೂರ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 3.77 | 2.19 | 55.00 | 15.883953N /75.29894E | |
| 5 | ಬೆಳಗಾವಿ | ಸವದತ್ತಿ | ಮರಕುಂಬಿ | ಮರಕುಂಬಿ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 22.66 | 45.32 | 371.00 | 15.859289N /74.878095E | |
| 6 | ಬೆಳಗಾವಿ | ಅಥಣಿ | ಕೊಟ್ಟಲಗಿ | ಕೊಟ್ಟಲಗಿ ಬಸಿನೀರು ಕೆರೆ ಅಭಿವೃದ್ಧಿ ಕಾಮಗಾರಿ | 50.00 | 13.50 | 4.50 | 55.00 | 16°56'58"N/75° 20'33"E | |
| 7 | ಬೆಳಗಾವಿ | ಕಾಗವಾಡ | ಮಂಗಸೂಳಿ | ಮಂಗಸೂಳಿ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 3.58 | 8.60 | 50.00 | 16°44'23"N/74° 49'16"E/ | |
| 8 | ಧಾರವಾಡ | ಧಾರವಾಡ | ತಡಕೋಡ | ತಡಕೋಡ ಕೆರೆ ಅಭಿವೃದ್ಧಿ ಕಾಮಗಾರಿ | 75.00 | 6.16 | 9.75 | 110.00 | 15°36'45"N/74° 54'15"E | |
| 9 | ಧಾರವಾಡ | ಧಾರವಾಡ | ಮದಿಕೊಪ್ಪ | ಮದಿಕೊಪ್ಪ ಕೆರೆ ಅಭಿವೃದ್ಧಿ ಕಾಮಗಾರಿ | 75.00 | 4.00 | 5.20 | 309.38 | 15°31'05"N/74° 50'55"E | |
| 10 | ಧಾರವಾಡ | ಕಲಘಟಗಿ | ಮುತ್ತಗಿ | ಬಿ.ಶೀಗಿಗಟ್ಟಿ ಗ್ರಾಮದ ಹೊಸಕೆರೆ ಅಭಿವೃದ್ದಿ ಕಾಮಗಾರಿ | 75.00 | 11.66 | 149.08 | 465.75 | 15°28'54"N / 74° 95'31"E | |
| 11 | ಧಾರವಾಡ | ಕಲಘಟಗಿ | ಗಂಜಿಗಟ್ಟಿ | ಬಗಡಗೇರಿ ಗ್ರಾಮದ ಹಿರೆಕೆರೆ ಅಭಿವೃದ್ಧಿ ಕಾಮಗಾರಿ | 75.00 | 9.00 | 13.12 | 63.64 | 15°75'33"N/75° 23'33"E | |
| 12 | ಗದಗ | ಲಕ್ಷ್ಮೇಶ್ವರ | ಬಾಳೆಹೊಸೂರ | ಬಾಳೇಹೊಸೂರ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 0.32 | 31.97 | 131.93 | 14°99'70"N/75° 58'112"E | |
| 13 | ಗದಗ | ಮುಂಡರಗಿ | ಪೇಟಾಲೂರ | ಪೇಠಾಲೂರ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 1.04 | 104 | 364 | 15°34'32"N/75° 81'36"E | |
| 14 | ಗದಗ | ಗದಗ | ಹರ್ತಿ | ಹರ್ತಿ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 0.12 | 12.14 | 60.00 | 15°32'06"N/75° 58'75"E | |
| 15 | ಹಾವೇರಿ | ಹಾನಗಲ್ | ಹಿರೆಕಣಗಿ | ಚಿಕ್ಕೆರಿ ಹೊಸಳ್ಳಿ ಗ್ರಾಮದ ಚಿಕ್ಕೆರಿ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 3.37 | 25.58 | 31.59 | 14°75'39"N /75° 09'66"E | |

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯ್ತಿ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಜಲಾನಯನ ಪ್ರದೇಶ (ಚ. ಕಿ.ಮೀ) | ಜಲಾವೃತ ಪ್ರದೇಶ (ಹೆಕ್ಟೇರ್) | ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ) | ಅಕ್ಷಾಂಶ/ರೇಖಾಂಶ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 16 | ಹಾವೇರಿ | ಶಿಗ್ಗಾಂವ್ | ನೀರಲಗಿ | ನೀರಲಗಿ ಗ್ರಾಮದ ರೆಡ್ಡಿ ಕೆರೆ ಅಭಿವೃದ್ಧಿ ಕಾಮಗಾರಿ. | 50.00 | 7.90 | 2.90 | 41.00 | 15°08'77"N / 75° 16'94"E | |
| 17 | ಹಾವೇರಿ | ಹಾವೇರಿ | ದೇವಿಹೊಸೂರ | ದೇವಿಹೊಸುರ ಹಿರೇಕೆರೆ ಅಭಿವೃದ್ಧಿ ಕಾಮಗಾರಿ. | 100.00 | 31.08 | 104.00 | 99.00 | 14°47'39"N / 75° 19'22"E | |
| 18 | ವಿಜಯಪುರ | ವಿಜಯಪುರ | ಅಲಿಯಬಾದ್ | ದ್ಯಾಬೇರಿ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 18.14 | 29.95 | 126.00 | 16° 53'10.07"N /75° 50'34.37"E | |
| 19 | ವಿಜಯಪುರ | ಮುದ್ದೇಬಿಹಾಳ | ಹಡಲಗೇರಿ | ಗೆದ್ದಲಮರಿ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 5.32 | 29.97 | 122.00 | 16° 20'57"N / 76° 05'54"E/ | |
| 20 | ವಿಜಯಪುರ | ಇಂಡಿ | ನಿಂಬಾಳ | ನಿಂಬಾಳ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 10.55 | 28.92 | 122.00 | 17° 05'20.56"N /75° 50'47.95"E | |
| 21 | ಬಾಗಲಕೋಟೆ | ಇಳಕಲ್ | ಹಿರೇಶಿಂಗನಗುತ್ತಿ | ಹಿರೇಶಿಂಗನಗುತ್ತಿ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 51.39 | 111.57 | 842.00 | 15° 59'14.12"N 76° 11'52.97"E | |
| 22 | ಬಾಗಲಕೊಟೆ | ಮುಧೋಳ | ಮೆಟಗುಡ್ಡ | ಮೆಟಗುಡ್ಡ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 17.48 | 20.23 | 186.00 | 16° 15'15"N /75° 14'39"E | |
| 23 | ಉತ್ತರ ಕನ್ನಡ | ಹಳಿಯಾಳ | ಜನಗಾ | ಜನಗಾ ಕೆರೆ ಸ.ನಂ.97 ಬ್ಲಾಕ ನಂ 180 ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 0.82 | 5.10 | 70.55 | 15°14'38.06"N/74° 50'0.30"E | |
| 24 | ಕಲಬುರಗಿ | ಅಫಜಲಪೂರ | ಗೊಬ್ಬುರ ಬಿ | ಗೊಬ್ಬುರ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 115.50 | 166.00 | 1000.00 | 17°16'57.68"N/ 76° 41'43"E | |
| 25 | ಕಲಬುರಗಿ | ಆಳಂದ | ಸರಸಂಬಾ | ಸರಸಂಬಾ ಕೆರೆ ಅಭಿವೃಧ್ಧಿ | 100.00 | 9.00 | 10.00 | 85.00 | 17.571614N/76.403781E | |
| 26 | ಕಲಬುರಗಿ | ಕಲಬುರಗಿ | ಮೇಳಕುಂದಾ | ಹುಣಸಿಹಡಗಿಲ್ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 4.25 | 8.57 | 66.00 | 17°21'6.12"N/ 76° 40'49.08"E | |
| 27 | ಕಲಬುರಗಿ | ಸೇಡಂ | ಲಿಂಗಮಪಲ್ಲಿ | ನರಸಪ್ಪ ಕೆರೆ (ಬೊಂದೆಪಲ್ಲಿ ಗ್ರಾಮ) ಅಭಿವೃದ್ಧಿ ಕಾಮಗಾರಿ | 100.00 | 3.60 | 16.00 | 42.00 | 17° 06'23"N77° 27'10"E/ | |
| 28 | ಯಾದಗಿರಿ | ಗುರಮಿಟಕಲ್ | ಅಜಲಾಪುರ | ತೂರ ಕೆರೆ (ಬದ್ದೆಪಲ್ಲಿ) ಅಭಿವೃದ್ಧಿ ಕಾಮಗಾರಿ | 100.00 | 15.72 | 78.84 | 105.00 | 16°35'12"N/ 77°22'31"E | |
| 29 | ಯಾದಗಿರಿ | ಸುರಪೂರ | ಮಾಲಗಟ್ಟಿ | ಮುಸಾಖಾನ ಕೆರೆ (ಮಾಲಗತ್ತಿ) ಅಭಿವೃದ್ಧಿ ಕಾಮಗಾರಿ | 100.00 | 26.07 | 64.54 | 53.00 | 16°36'59.21"N/ 76° 39'27.25"E | |
| 30 | ಯಾದಗಿರಿ | ವಡಗೇರಾ | ವಡಗೇರ | ಹೊಸ ಕೆರೆ ವಡಗೇರಾ ಅಭಿವೃದ್ಧಿ ಕಾಮಗಾರಿ | 100.00 | 5.26 | 22.25 | 70.00 | 16°34'02"N/ 77°05'49"E | |
| 31 | ಯಾದಗಿರಿ | ಗುರಮಿಟಕಲ್ | ಗಾಜರಕೋಟ | ಸೊಂತನ ಕೆರೆ ರಾಂಪೂರ ಅಭಿವೃದ್ಧಿ ಕಾಮಗಾರಿ | 100.00 | 1.73 | 14.00 | 40.00 | 16°52'58.46"N/ 77°16'0.00"E | |
| 32 | ಬೀದರ | ಕಮಲನಗರ | ಬೋಪಾಳಗಡ ಬೆಳಕುಣಿ | ಬೆಳಕುಣಿ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 6.65 | 61.16 | 1000.00 | 18° 16'57.2"N/77° 16'57.2"E | |

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯ್ತಿ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಜಲಾನಯನ ಪ್ರದೇಶ (ಚ. ಕಿ.ಮೀ) | ಜಲಾವೃತ ಪ್ರದೇಶ (ಹೆಕ್ಟೇರ್) | ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ) | ಅಕ್ಷಾಂಶ/ರೇಖಾಂಶ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 33 | ಬೀದರ | ಬೀದರ | ಅಲಿಯಂಬರ | ಅಲಿಯಂಬರ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 3.60 | 20.20 | 403.00 | 17° 58'04.7"N/77° 25"12.3"E/ | |
| 34 | ಬೀದರ | ಭಾಲ್ಕಿ | ಮತಿ ಮೇಳಕುಂದ | ಮೆತಿ ಮೇಳಕುಂಧಾ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 0.77 | 4.40 | 40.00 | 18° 10'17"N/77° 13'43"E/ | |
| 35 | ಬೀದರ | ಬಸವಕಲ್ಯಾಣ | ಆಲಗೂಡ | ಆಲಗೂಡ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 5.88 | 9.76 | 170.00 | 17° 46'33"N/76° 49"36.4"E | |
| 36 | ವಿಜಯನಗರ | ಹಡಗಲಿ | ತಳಕಲ್ಲು | ತಳಕಲ್ಲು ಕೆರೆ ಅಭಿವೃದ್ಧಿ ಕಾಮಗಾರಿ. | 50.00 | 6.40 | 65.00 | 279.00 | 14°55'60"N/ 76°2'48"E | |
| 37 | ವಿಜಯನಗರ | ಹೆಚ್.ಬಿ.ಹಳ್ಳಿ | ಹಣಸಿ | ಹನಸಿ ಕೆರೆ ಅಭಿವೃದ್ಧಿ ಕಾಮಗಾರಿ. | 50.00 | 5.61 | 292.40 | 175.00 | 14°56'46.5"N/ 76°18'28"E | |
| 38 | ವಿಜಯನಗರ | ಹರಪನಹಳ್ಳಿ | ಕಂಚಿಕೆರಿ | ಕಂಚಿಕೇರಿ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 26.78 | 10.69 | 108.00 | 14°37'08.1"N/ 75°58'25.2"E | |
| 39 | ವಿಜಯನಗರ | ಕೂಡ್ಲಿಗಿ | ಶಿವಪುರ | ಜಂಗಮಸೋವೆನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 3.23 | 35.47 | 50.00 | 14°57'34"N/ 76°20'15"E | |
| 40 | ಕೊಪ್ಪಳ | ಕನಕಗಿರಿ | ಚಿಕ್ಕಮಾದಿನಾಳ | ರಾಮದುರ್ಗ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 15.16 | 26.53 | 45.00 | 15.502246N/76.337181E | |
| 41 | ಕೊಪ್ಪಳ | ಕೊಪ್ಪಳ | ಕಲಕೇರಿ | ಬುಡಿಶೆಟ್ಟಿನಾಳ ಗ್ರಾಮದ ಹತ್ತಿರ ಕೆರೆ ಅಭಿವೃದ್ಧಿ ಕಾಮಗಾರಿ. | 50.00 | 59.05 | 141.23 | 852.00 | 15°27'41.6"N/76° 09'44.3"E | |
| 42 | ರಾಯಚೂರು | ರಾಯಚೂರು | ಚಂದ್ರಬಂಡಾ | ಚಂದ್ರಬಂಡಾ ಕೆರೆ ಅಬಿವೃದ್ಧಿ ಕಾಮಗಾರಿ | 250.00 | 16.38 | 32.00 | 68.00 | 16.242822N/77.446007E | |
| 43 | ರಾಯಚೂರು | ಸಿರವಾರ | ನವಲಕಲ್ | ಸಾರಬಂಡಾ ಕೆರೆ ಅಭಿವೃದ್ಧಿ ಕಾಮಗಾರಿ | 300.00 | 49.73 | 73.65 | 506.00 | 16.176622 N/76.928607E | |
| 44 | ರಾಯಚೂರು | ಲಿಂಗಸುಗೂರು | ನಾಗರಾಳ | ಜೂಲಗುಡ್ಡ ಕೆರೆ ಅಭಿವೃದ್ಧಿ ಕಾಮಗಾರಿ | 200.00 | 17.61 | 40.52 | 120.00 | 16.122620N /76.345722E | |
| 45 | ರಾಯಚೂರು | ರಾಯಚೂರು | ಮಿಟ್ಟಿಮಲ್ಕಾಪೂರ | ಸಮುದ್ರ ಕೆರೆ ಅಭಿವೃದ್ಧಿ ಕಾಮಗಾರಿ | 250.00 | 22.10 | 72.72 | 79.00 | 16.151167N /77.378192E | |
| 46 | ರಾಯಚೂರು | ಮಸ್ಕಿ | ಅಂಕುಶದೊಡ್ಡಿ | ಹೂವಿನಬಾವಿ ಕೆರೆ ಅಭಿವೃದ್ಧಿ ಕಾಮಗಾರಿ | 250.00 | 34.45 | 75.00 | 40.00 | 16.044519N /76.618364E | |
| 47 | ರಾಮನಗರ | ಕನಕಪುರ | ದೊಡ್ಡಾಲಹಳ್ಳಿ | ದೊಡ್ಡಾಲಹಳ್ಳಿ ಕೆರ ,ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 92.00 | 74.20 | 445.00 | 12° 25' 36" /77° 22' 19" | |
| 48 | ರಾಮನಗರ | ಕನಕಪುರ | ತೊಕ್ಕಸಂದ್ರ | ಮಾವತ್ತೂರು ಕೆರೆ ಅಭಿವೃದ್ಧಿ ಕಾಮಗಾರಿ | 100.00 | 353.60 | 20.25 | 1011.00 | 12° 56' 46" / 77° 45' 56" | |
| 49 | ರಾಮನಗರ | ಕನಕಪುರ | ಹಿರಿಂಡಪ್ಪನಹಳ್ಳಿ | ತಟ್ಟಿಗುಪ್ಪೆ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 29.00 | 39.44 | 378.00 | 12° 26' 24" / 77° 32' 45" | |

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯ್ತಿ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಜಲಾನಯನ ಪ್ರದೇಶ (ಚ. ಕಿ.ಮೀ) | ಜಲಾವೃತ ಪ್ರದೇಶ (ಹೆಕ್ಟೇರ್) | ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ) | ಅಕ್ಷಾಂಶ/ರೇಖಾಂಶ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 50 | ತುಮಕೂರು | ಮಧುಗಿರಿ | ದೊಡ್ಡೇರಿ | ದೊಡ್ಡೇರಿ ಹಿರೇಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ. | 100.00 | 15.98 | 20.30 | 78.47 | 14$^0$ 17′ 31″ / 76$^0$ 42′ 03″ | |
| 51 | ತುಮಕೂರು | ತಿಪಟೂರು | ಕುಪ್ಪಾಳು | ಕಿಬ್ಬನಹಳ್ಳಿ ಹೋಬಳಿ ಕರಡಾಳು ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ. | 100.00 | 14.81 | 54.22 | 64.54 | 13.2361 / 76.5627 | |
| 52 | ತುಮಕೂರು | ಕುಣಿಗಲ್ | ಹುತ್ರಿದುರ್ಗ | ಹಾಲವಾಗಿಲು ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 2.56 | 20.20 | 43.00 | 12$^0$ 58′ 18″ / 77$^0$ 07′ 58″ | |
| 53 | ತುಮಕೂರು | ಕುಣಿಗಲ್ | ಕಿತ್ತಮಂಗಲ | ಕಿತ್ತಮಂಗಲ ಕೆರೆ ಅಭಿವೃದ್ಧಿ ಕಾಮಗಾರಿ. | 100.00 | 17.53 | 10.30 | 137.00 | 14$^0$ 10′ 25″ / 76$^0$ 32′ 16″ | |
| 54 | ತುಮಕೂರು | ಗುಬ್ಬಿ | ಹಾಗಲವಾಡಿ | ಹಾಗಲವಾಡಿ ಹೋಬಳಿ ಹಾಗಲವಾಡಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ. | 100.00 | 23.82 | 122.40 | 91.66 | 13$^0$ 30′ 12″ / 76$^0$ 45′ 57″ | |
| 55 | ತುಮಕೂರು | ಶಿರಾ | ಲಕ್ಕಿಸಾಗರ | ಚಿಕ್ಕಸಂದ್ರ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ. | 100.00 | – | 245.54 | 405.35 | 13$^0$ 42′ 47″ / 76$^0$ 50′ 36″ | |
| 56 | ತುಮಕೂರು | ಪಾವಗಡ | ಅರಸೀಕೆರೆ | ತುಮಕುಂಟೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | – | 44.40 | 60.40 | 14$^0$ 4′ 17″ / 77$^0$ 3′ 51″ | |
| 57 | ಚಿಕ್ಕಮಗಳೂರು | ಅಜ್ಜಂಪುರ | ಶಿವನಿ | ಶಿವನಿ ದೊಡ್ಡಕೆರೆ ಅಭಿವೃಧ್ಧಿ | 100.00 | 5.36 | 68.00 | 100.22 | 13$^0$ 82′ 22″ /75$^0$ 3′ 27″ | |
| 58 | ಚಿಕ್ಕಮಗಳೂರು | ತರೀಕೆರೆ | ನೇರಲಕೆರೆ | ಕುಂಟಿನಮಡು ವೀರಣ್ಣನಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 0.30 | 6.90 | 42.10 | 13$^0$ 45′ 43″ / 75$^0$ 52′ 8″ | |
| 59 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಪಾತಪಾಳ್ಯ | ಪಾತಪಾಳ್ಯ ದೊಡ್ಡ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 12.00 | 61.53 | 462.00 | 13.7466 / 77.9476 | |
| 60 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಗುಟ್ಟಪಾಳ್ಯ | ಗುಟ್ಟಪಾಳ್ಯ ಬಳ್ಳಸಂದ್ರ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 7.14 | 36.03 | 123.00 | 13.8720 / 77.9238 | |
| 61 | ಚಿಕ್ಕಬಳ್ಳಾಪುರ | ಗೌರಿಬಿದನೂರು | ಹಲ್ಲೇಹಳ್ಳಿ | ಮಂಚೇನಹಳ್ಳಿ ಹೋಬಳಿ ಉಪ್ಪಾರಹಳ್ಳಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 3.20 | 7.35 | 44.53 | 13$^0$ 28′ 5″ / 77$^0$ 33′ 34″ | |
| 62 | ಚಿಕ್ಕಬಳ್ಳಾಪುರ | ಗೌರಿಬಿದನೂರು | ಗೆದರೆ | ಕೆಂಕರೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 5.27 | 17.46 | 80.76 | 13.3356 / 77.2832 | |
| 63 | ಚಿತ್ರದುರ್ಗ | ಚಿತ್ರದುರ್ಗ | ಗೋನೂರು | ಮಲ್ಲಾಪುರ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 75.00 | 26.52 | 91.84 | 130.31 | 14$^0$ 14′ 57″ / 76$^0$ 24′ 25″ | |
| 64 | ಚಿತ್ರದುರ್ಗ | ಚಿತ್ರದುರ್ಗ | ಜೆ.ಎನ್.ಕೋಟೆ | ಜೆ.ಎನ್. ಕೋಟೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 80.00 | 36.20 | 130.68 | 142.05 | 14$^0$ 10′ 25″ / 76$^0$ 32′ 16″ | |
| 65 | ಚಿತ್ರದುರ್ಗ | ಹಿರಿಯೂರು | ವಿ.ವಿ.ಪುರ | ಭರಂಗಿರಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 60.00 | 3.59 | 79.92 | 81.50 | 13$^0$ 55′ 36″ / 76$^0$ 29′ 34″ | |

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯ್ತಿ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಜಲಾನಯನ ಪ್ರದೇಶ (ಚ. ಕಿ.ಮೀ) | ಜಲಾವೃತ ಪ್ರದೇಶ (ಹೆಕ್ಟೇರ್) | ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ) | ಅಕ್ಷಾಂಶ/ರೇಖಾಂಶ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 66 | ಚಿತ್ರದುರ್ಗ | ಚಳ್ಳಕೆರೆ | ಮೀರಸಾಬಿಹಳ್ಳಿ | ರಾಣಿಕೆರೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 90.00 | 157.38 | 582.76 | 891.00 | 14° 19' 21" / 76° 44' 24" | |
| 67 | ಚಿತ್ರದುರ್ಗ | ಚಳ್ಳಕೆರೆ | ಪಿ.ಮಹದೇವಪುರ | ಕಡೆಹುಡೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 75.00 | 8.00 | 68.31 | 67.18 | 14° 10' 26" / 76° 56' 57" | |
| 68 | ಚಿತ್ರದುರ್ಗ | ಚಳ್ಳಕೆರೆ | ನಾಯಕನಹಟ್ಟಿ | ನಾಯಕನಹಟ್ಟಿ ಚಿಕ್ಕಕೆರೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 60.00 | 161.81 | 327.00 | 608.00 | 14° 19' 21" / 76° 44' 24" | |
| 69 | ದಾವಣಗೆರೆ | ದಾವಣಗೆರೆ | ನೇರ್ಲಗಿ | ಕೊಡಗನೂರು ಕೆರೆ ಅಭಿವೃದ್ಧಿ ಕಾಮಗಾರಿ | 300.00 | 109.27 | 175.00 | 220.40 | 14° 20' 35" / 76° 3' 41" | |
| 70 | ಕೋಲಾರ | ಕೋಲಾರ | ಕೊಪ್ಪ | ಕಸಬಾ ಹೋಬಳಿ ಕೊಪ್ಪ ದೊಡ್ಡ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 45.21 | 92.27 | 68.80 | 12° 58' 18" / 78° 9' 13" | |
| 71 | ಕೋಲಾರ | ಕೆ.ಜಿ.ಎಫ್ | ರಾಮಸಾಗರ | ಕ್ಯಾಸಂಬಹಳ್ಳಿ ಹೋಬಳಿ, ರಾಮಸಾಗರ ದೊಡ್ಡ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 2059.00 | 485.63 | 510.31 | 13° 12' 57" / 77° 58' 57" | |
| 72 | ಮೈಸೂರು | ಮೈಸೂರು | ಗೋಪಾಲಪುರ | ಮೂಗನಹುಂಡಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 14.27 | 22.00 | 53.00 | 12.1531 / 76.3406 | |
| 73 | ಮೈಸೂರು | ಹೆಚ್.ಡಿ.ಕೋಟೆ | ಮಾದಪುರ | ಹೊಳೆಹುಂಡಿ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 3.17 | 13.85 | 200.00 | 12° 07' 26" / 76° 25' 20" | |
| 74 | ಮೈಸೂರು | ಹೆಚ್.ಡಿ.ಕೋಟೆ | ಮಾದಪುರ | ಚೊಟ್ಟನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 3.50 | 21.68 | 120.00 | 12° 07' 56" / 76° 23' 28" | |
| 75 | ಮೈಸೂರು | ಹೆಚ್.ಡಿ.ಕೋಟೆ | ಭೀಮನಹಳ್ಳಿ | ಮುಷ್ಕೆರೆ ಕೆರೆ ಅಭಿವೃದ್ಧಿ ಕಾಮಗಾರಿ | 100.00 | 1.28 | 6.40 | 71.00 | 12° 07' 26" / 76° 25' 20" | |
| 76 | ಚಾಮರಾಜನಗರ | ಚಾಮರಾಜನಗರ | ಜ್ಯೋತಿಗೌಡನಪುರ | ಹೊಂಡರಬಾಳು ಕೆರೆ, ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 23.55 | 72.00 | 122.00 | 11° 55' 22" / 77° 03' 30" | |
| 77 | ಚಾಮರಾಜನಗರ | ಚಾಮರಾಜನಗರ | ಹೊಂಗನೂರು | ಬೆಲ್ಲತ್ತಸಾನೆ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 45.89 | 66.85 | 971.00 | 11° 56' 24" / 77° 06' 04" | |
| 78 | ಚಾಮರಾಜನಗರ | ಗುಂಡ್ಲುಪೇಟೆ | ಶಿವಪುರ | ಕಲ್ಕಟ್ಟೆ ಕೆರೆಯ ನಾಲೆಗಳ ಅಭಿವೃದ್ಧಿ ಕಾಮಗಾರಿ | 100.00 | 36.96 | 91.00 | 940.00 | 11° 44' 52" / 76° 41' 24" | |
| 79 | ಚಾಮರಾಜನಗರ | ಹನೂರು | ಗೋಪಿನಾಥಂ | ಗೋಪಿನಾಥ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 28.00 | 45.00 | 350.00 | 12° 03' 13" / 77° 41' 24" | |
| 80 | ಮಂಡ್ಯ | ನಾಗಮಂಗಲ | ಹಂಪಾಪುರ | ಉಯ್ಯಾನಹಳ್ಳಿ ಅಣೆಕಟ್ಟಿನ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 6.95 | 6.29 | 41.00 | 12° 45' 21" / 76° 40' 38" | |
| 81 | ಮಂಡ್ಯ | ನಾಗಮಂಗಲ | ಹೊನ್ನಾವರ | ಕಟಗಹಳ್ಳಿ ಕೆರೆ ಮತ್ತು ರಘುರಾಂಪುರ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 17.54 | 24.24 | 101.82 | 12° 40' 32" / 76° 42' 36" | |

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯ್ತಿ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಜಲಾನಯನ ಪ್ರದೇಶ (ಚ. ಕಿ.ಮೀ) | ಜಲಾವೃತ ಪ್ರದೇಶ (ಹೆಕ್ಟೇರ್) | ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ) | ಅಕ್ಷಾಂಶ/ರೇಖಾಂಶ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 82 | ಮಂಡ್ಯ | ಮದ್ದೂರು | ಚೀಣ್ಯ | ಆತಗೂರು ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 3.35 | 75.70 | 124.00 | 12° 66' 55" / 77° 66' 28" | |
| 83 | ಮಂಡ್ಯ | ಮಳವಳ್ಳಿ | ದೊಡ್ಡಬ್ಯಾಡರಹಳ್ಳಿ | ಹಲಗೂರು ಹೋಬಳಿ, ಬ್ಯಾಡರಹಳ್ಳಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 100.00 | 2.50 | 25.60 | 98.00 | 12° 39' 02" / 77° 23' 00" | |
| 84 | ಹಾಸನ | ಅರಸೀಕೆರೆ | ಹಾರನಹಳ್ಳಿ | ಕಸಬಾ ಹೋಬಳಿ, ಹಾರನಹಳ್ಳಿ ದೊಡ್ಡಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 80.00 | 59.07 | 157.82 | 152.66 | 12° 14' 13" / 76° 13' 36" | |
| 85 | ಹಾಸನ | ಅರಸೀಕೆರೆ | ರಂಗಾಪುರ | ಗಂಡಸಿ ಹೋಬಳಿ, ಅಪ್ಪೇನಹಳ್ಳಿ ಬಿಳ್ಳೇನಹಳ್ಳಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 80.00 | 15.68 | 21.22 | 43.00 | 13° 10' 37" / 76° 12' 43" | |
| 86 | ಹಾಸನ | ಅರಸೀಕೆರೆ | ಹಿರಿಯೂರು | ಬಾಣಾವರ ಹೋಬಳಿ, ಕಾರಬೋರನಹಟ್ಟಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 75.00 | 12.50 | 19.26 | 51.00 | 13° 18' 21" / 76° 10' 04" | |
| 87 | ಹಾಸನ | ಅರಸೀಕೆರೆ | ಪುರಲೇಹಳ್ಳಿ | ಬಾಣಾವರ ಹೋಬಳಿ, ಕೊಂಡಬಾಗಿಲು ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 75.00 | 20.98 | 60.70 | 68.70 | 13° 23' 59" / 76° 14' 53" | |
| 88 | ಕೊಡಗು | ವಿರಾಜಪೇಟೆ | ಸಿದ್ದಾಪುರ | ಸಿದ್ಧಾಪುರ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 1.20 | 2.00 | 89.10 | 12.2908 / 78.8739 | |
| 89 | ಕೊಡಗು | ಪೊನ್ನಂಪೇಟೆ | ಅರವತ್ತೊಕ್ಲು | ಮುಗಟಗೇರಿ ಇಗ್ಗುತಪ್ಪ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 0.80 | 2.00 | 45.00 | 12.1591 / 75.9151 | |
| 90 | ಕೊಡಗು | ಪೊನ್ನಂಪೇಟೆ | ಅರವತ್ತೊಕ್ಲು | ಹಳ್ಳಿಗಟ್ಟು ಪೈಸಾರಿ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 1.30 | 0.50 | 40.00 | 12.139725 / 75.918109 | |
| 91 | ಕೊಡಗು | ಸೋಮವಾರಪೇಟೆ | ಬೆಂಬಳ್ಳೂರು | ಬ್ಯಾಡಗಟ್ಟ ದೇವರ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 0.88 | 0.42 | 41.00 | 12.769999 / 75.883785 | |
| 92 | ಕೊಡಗು | ಸೋಮವಾರಪೇಟೆ | ಬೆಸೂರು | ನಿಲುವಾಗಿಲು ವಾಲಗದ ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 0.48 | 0.90 | 40.50 | 12.772582 / 75.9432 | |
| 93 | ಕೊಡಗು | ಸೋಮವಾರಪೇಟೆ | ನಿಡ್ತ | ಮುಳ್ಳೂರು ಜೋಡು ಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿ | 150.00 | 0.40 | 2.00 | 44.24 | 12.687365 / 75.921656 | |
| | | | | ಒಟ್ಟಾರೆ | 10000.00 | | | | | |

S.R. Shivashankar
Deputy Secretary to Government
Revenue Department (DM & SR)

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ